ಸಿ.ಸಿ. ನಂಃ 1046/2022 ಪಿ.ಡಬ್ಲೂ.1

ದಿನಾಂಕಃ 23.06.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ಶ್ರೀ. ಪಿ.ಕೆ.ವಿ. ವಕೀಲರಿಂದ.

ನಾನು ಬಿ.ಎಸ್.ಸಿ. ವ್ಯಾಸಂಗ ಮಾಡಿರುತ್ತೇನೆ. ಆರೋಪಿ ನಿಮಗೆ ಎಷ್ಟು ವರ್ಷದಿಂದ ಪರಿಚಯ ಎಂದರೆ ಸಾಕ್ಷಿ 20 ವರ್ಷದಿಂದ ಪರಿಚಯ ಎಂದು ನುಡಿಯುತ್ತಾರೆ. ನೀವು ಈ ಪ್ರಕರಣದಲ್ಲಿ ಹಾಕಿರುವ ಚೆಕ್ ನಿಮ್ಮ ಕೈಗೆ ಯಾವಾಗ ಬಂದಿರುತ್ತದೆ ಎಂದರೆ ಸಾಕ್ಷಿ 2020 ನೇ ಇಸ್ವಿ 12 ನೇ ತಿಂಗಳಿನಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿ ನಿಮ್ಮ ಬಳಿ ಸಾಲ ತೆಗೆದುಕೊಂಡಿರುತ್ತಾರೆ ಎಂದು ಹೇಳಿರುತ್ತಿರಿ. ಮನೆ ಕಟ್ಟಿಸಲು ಮತ್ತು ಹಳೆ ಸಾಲಗಳನ್ನು ತೀರಿಸಲು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಹಣವನ್ನು ಯಾವಾಗ ಎಲ್ಲಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ 19.12.2020 ರಲ್ಲಿ ನಮ್ಮ ಮನೆಯಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಸಾಲ ಕೊಡಬೇಕಾದರೆ ನಮ್ಮ ಮನೆಯಲ್ಲಿ ನಾನು ನನ್ನ ಹೆಂಡತಿ ಇರುತ್ತೇವೆ ಆರೋಪಿ ಒಬ್ಬರೆ ಇರುತ್ತಾರೆ.

2. ಸಾಲ ಕೊಡುವ ಎಷ್ಟು ದಿನಗಳ ಮುಂಚೆ ಹಣ ಕೇಳಿರುತ್ತಾರೆ ಎಂದರೆ ಸಾಕ್ಷಿ 15 ದಿನಗಳಿಂದ ಒಂದು ತಿಂಗಳ ಮುಂಚೆ ಕೇಳಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗೆ ಕೊಟ್ಟಿರುವ ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಿರುವ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಹಣವನ್ನು ಡ್ರಾ ಮಾಡಿರುವುದಿಲ್ಲ ಹಣ ಮನೆಯಲ್ಲಿತ್ತು ಎಂದು ನುಡಿಯುತ್ತಾರೆ. ಆ ದಿನ ಮನೆಯಲ್ಲಿ ಹಣ ಇತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ನಾನು ಯಾವುದೇ ದಾಖಲಾತಿ ಹಾಕಿರುವುದಿಲ್ಲ. ಸಾಕ್ಷಿಗೆ ನಿ.ಪಿ.1 ಅನ್ನು ತೋರಿಸಲಾಗಿ ಸಹಿ ಮಾಡಿರುವ ಶಾಹಿಗೆ ಹಾಗೂ ಚೆಕ್ ಅಮೌಂಟ್ ಬರೆದಿರುವ ಶಾಹಿಗೆ ವ್ಯತ್ಯಾಸ ಇದೆಯಾ ಎಂದರೆ ಸಾಕ್ಷಿ ಅದು ನನಗೆ ಗೊತ್ತಾಗುತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಚೆಕ್ ಅನ್ನು ಬರೆದು ತಂದು ನನ್ನ ಮುಂದೆ ಕೊಟ್ಟಿರುತ್ತಾರೆ. ಹಾಗಾದರೆ ಚೆಕ್ ನಿಮ್ಮ ಮುಂದೆ ಬರೆದಿಲ್ಲ ಎಂದರೆ ಸಾಕ್ಷಿ ಹೌದು ಮೊದಲೇ ಬರೆದು ತಂದಿದ್ದರು ಎಂದು ನುಡಿಯುತ್ತಾರೆ.

3. ನಿಮ್ಮ ಬಳಿ ಆರೋಪಿ ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲು ಇಲ್ಲ. ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಸಾ ಓ ಹೇ ಕೇ ಸ ಅದೆ.

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
**ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.**